Repairs to Varadaraja Temple.

*Q.—72. Smt. G. C. BHAGEERATHAMMA (Tumkur).—

Will the Government be pleased to state:—

(*a*) whether it is a fact that a sum of Rs. 7,000 has been sanctioned by the Endowment Commissioner about 5 years back to repair Varadaraja Temple at Hebbur in Tumkur Taluk;

(*b*) if so, why the work has not been taken up so far?

A.—Sri M. V. KRISHNAPPA (Minister for Revenue).—

(*a*) Yes.

(*b*) This work could not be executed by the Public Works Department as fresh estimates are to be prepared for sanction.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹೊಸ ಅಂದಾಜುಗಳನ್ನು ತಯಾರು ಮಾಡುಲು ಇನ್ನೂ ಎಷ್ಟು ದಿವಸ ಬೇಕಾಗಬಹುದು ?

†ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸ ಅಂದಾಜನ್ನು ತುಮಕೂರಿನ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರು ತಯಾರು ಮಾಡಬೇಕು.

ಶ್ರೀ ಕೆ. ಲಕ್ಕಪ್ಪ.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಎಸ್ಟಿಮೇಟ್ ಮಾಡಿದ ಪ್ರಕಾರ ಮುಜರಾಯಿ ಇಲಾಖೆಯವರು 7,000 ರೂ. ಮಂಜೂರುಮಾಡಿದ್ದರು. ಮುಜರಾಯಿ ಇಲಾಖೆಗೆ ಪಿ. ಡಬ್ಲ್ಯೂ. ಡಿ. ಎಸ್ಟಿಮೇಟ್ ಮಾಡಿ ಕಳಿಸಿದ್ದಾರಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಸ್ಟಿಮೇಟು ಮಾಡಿ ಕಳಿಸಿದ್ದರು. ಆದರೆ ರೇಟ್ಸ್ ರಿವೈಸ್ ಆಗಿರುವುದರಿಂದ ಪುನಃ ಎಸ್ಟಿಮೇಟ್ ಮಾಡಿ ಕಳಿಸಬೇಕೆಂದು ಕೇಳಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ರಿವೈಸ್ ಎಸ್ಟಿಮೇಟ್ ತಯಾರುಮಾಡಿ ಕಳಿಸುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ರಿವೈಸ್ ಎಸ್ಟಿಮೇಟನ್ನು ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರು ಬೇಗ ಮಾಡಬಹುದು ಎಂಬ ಭರವಸೆ ಇದೆ.

ಶ್ರೀ ಬಿ. ಬೈರಪ್ಪಾಜಿ.—ಹಣ ಮಂಜೂರು ಆಗಿರತಕ್ಕ ತಾರೀಖು ಯಾವುದು ?

ಶ್ರೀ ಎಂ. ವಿ. ಕೃಷ್ಣಪ್ಪ.—1962ನೇ ಇಸವಿ ಫೆಬ್ರುವರಿ ತಿಂಗಳಿನಲ್ಲಿ ಸ್ಯಾಂಕ್ಷನ್ ಆಗಿದೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಧರ್ಮದರ್ಶಿಗಳು ದೇವಸ್ಥಾನದ ಹಣವನ್ನು ಲಪಟಾಯಿಸುತ್ತಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಲಪಟಾಯಿಸಿದಂತೆ ಕಾಣುವುದಿಲ್ಲ. ಪುರಾತನಕಾಲದ ದೇವಸ್ಥಾನಗಳಿವೆ. ಮೂರುವರ್ಷಕ್ಕೆ ಧರ್ಮದರ್ಶಿಗಳನ್ನು ಬದಲಾಯಿಸುವ ಏರ್ಪಾಡು ಇದೆ. ಉತ್ಪತ್ತಿ ಕಡಿಮೆ ಇರುವ ದೇವಸ್ಥಾನಕ್ಕೆ ಸರಕಾರ ಗ್ರಾಂಟ್ ಕೊಟ್ಟಿದ್ದಾರೆ. ದೇವಸ್ಥಾನದ ಹಣವನ್ನು ಧರ್ಮದರ್ಶಿಗಳು ಲಪಟಾಯಿಸಿದರೆ ದೇವರೇ ನೋಡಿಕೊಳ್ಳಬೇಕು.

ಶ್ರೀ ಟಿ. ಮಾದೇಗೌಡ.—ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಕೆಲಸಗಳಿಗಾಗಿ ಒಂದು ಪ್ರತ್ಯೇಕವಾದ ಏರ್ಪಾಡು ಮಾಡುವುದಕ್ಕೆ ಸರಕಾರ ಯೋಚನೆ ಮಾಡಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮುಜರಾಯಿ ಇಲಾಖೆಯಲ್ಲಿ ಒಂದು ಇಂಜಿನಿಯರಿಂಗ್‌ಸೆರ್ ಕ್ರಿಯೇಟ್ ಮಾಡೋಣ ಎಂದು ಸರಕಾರದ ಉದ್ದೇಶ ಇದ್ದು, ಅದು ಬೇಗನೆ ಬರುವುದರಲ್ಲಿದೆ. ಏಕೆಂದರೆ ಮುಜರಾಯಿ ಇಲಾಖೆ ಕೆಲಸಗಳು ಅನೇಕಕಡೆ ತೀವ್ರವಾಗಿ ಆಗಬೇಕಾಗುತ್ತದೆ. ಕಳೆದ ಎರಡು ಮೂರು ವರ್ಷಗಳಲ್ಲಿ ಶ್ರವಣಬೆಳಗೊಳದಲ್ಲಿ 30-40 ಲಕ್ಷ ಖರ್ಚಾಗಿದೆ. ಮಹದೇಶ್ವರ ದೇವಸ್ಥಾನಕ್ಕೆ ಹೆಚ್ಚು ಹಣ ಖರ್ಚಾಗಿದೆ. ತಿರುಪತಿಯಲ್ಲಿ ಕೂಡ ಖರ್ಚುಮಾಡಿದೆ. ಈ ರೀತಿ ಹಿಂದೆ ಖರ್ಚುಮಾಡುತ್ತಿರಲಿಲ್ಲ. ಆದುದರಿಂದ ಇಂಜಿನಿಯರಿಂಗ್ ಸೆರ್ ಕ್ರಿಯೇಟ್ ಮಾಡೋಣ ಎಂದು ಇದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ದೇವಸ್ಥಾನಕ್ಕೆ ಭೇಟಿ ನೀಡಿದಮೇಲೆ ಈ ಹಣ ಮಂಜೂರು ಆಗಿದೆ ಅಲ್ಲವೇ ?

Sri M. V. KRISHNAPPA.—I am not concerned with the Management. ಯಾವಯಾವ ದೇವಸ್ಥಾನ ಯಾವ ಪರಿಸ್ಥಿತಿಯಲ್ಲಿವೆ; ಎಷ್ಟು ಹಣ ಖರ್ಚುಮಾಡಬೇಕಾಗುತ್ತದೆ ಎನ್ನುವುದನ್ನು ಅಂದಾಜು ಮಾಡಬೇಕಾಗುತ್ತದೆ. ಈ ರೀತಿಯಾಗಿ ಅನೇಕ ದೇವಸ್ಥಾನಗಳಿವೆ. ನಾನು ಪಾರ್ಲಮೆಂಟಿನ ಸದಸ್ಯನಾಗಿದ್ದಾಗ್ಗೆ 1960ನೇ ಇಸವಿಯಲ್ಲಿ ನಾನು ಹೋದಲ್ಲಿ ಶ್ರೀಮಾನ್ ಶಿವಪ್ಪನವರೂ ಸಹ ಭಾಷಣಮಾಡಿದರು. ಆಗ್ಗೆ ಜನ ನನ್ನ ಕಡೆಗೆ ಬಂದರು. ಆ ಮೇಲೆ ನಾನು ವರದರಾಜಸ್ವಾಮಿ ದೇವಸ್ಥಾನಕ್ಕೆ ಹೋದೆನು. ಅದು ಬಹಳ ಪುರಾತನ ಕಾಲದ ದೇವಸ್ಥಾನವಿದ್ದು ಬಿದ್ದುಹೋಗುವ ಸ್ಥಿತಿಯಲ್ಲಿದೆ. ಚೋಳರಾಜರ ಕಾಲಕ್ಕಿಂತ ಮೊದಲಿನ ಕಾಲದ ದೇವಸ್ಥಾನವಾಗಿದೆ. ಆಗ್ಗೆ ನಾನು ಪಾರ್ಲಮೆಂಟಿನ ಸದಸ್ಯನಾಗಿದ್ದುದರಿಂದ ಒಂದು ಕಾಗದವನ್ನು ಶ್ರೀ ಮಂಜಪ್ಪ ಗೌಡರಿಗೆ ಬರೆದೆನು. ಅದರ ಜೀರ್ಣೋದ್ಧಾರಕ್ಕಾಗಿ 7,000 ರೂಪಾಯಿ ಮಂಜೂರು ಮಾಡುವುದಕ್ಕೆ ಏರ್ಪಾಡು ನಡೆಯಿತು. ಈ ಜೀರ್ಣೋದ್ಧಾರ ಕಾರ್ಯ ಬೇಗ ಆಗುವುದಕ್ಕೆ ನಾನು ಸರ್ವ ಪ್ರಯತ್ನ ಮಾಡುತ್ತೇನೆ.

Land Revenue Allotment.

*Q.—129. Sri J. P. SARWESH (Serum).—

Will the Government be pleased to state: —

whether they would allot land revenue collected in town municipal areas to the respective municipalities in State ?

A.—Sri M. V. KRISHNAPPA (Minister for Revenue).—

There is no such proposal at present before Government. Hence, the question does not arise.

Sri J. P. SARWESH.—Whether the Government is aware that there are some Municipalities that are not in a position to provide minimum civic amenities due to want of funds ?

†Sri M. V. KRISHNAPPA.—As per present Municipal Act, a portion of the land revenue may be given as loan to the Municipalities for their normal expenditure or for developmental activities. If the present Act is amended that is a separate question.

ಶ್ರೀ ಬಿ. ಚೆನ್ನಬೈರೇಗೌಡ.—ಪಂಚಾಯಿತಿ ಹಾಗು ತಾಲ್ಲೂಕ್ ಬೋರ್ಡುಗಳಿಗೆ ಆಯಾಯ ಪ್ರದೇಶದಲ್ಲಿ ವಸೂಲಾಗುವ ಕಂದಾಯದ ಒಂದು ಭಾಗವನ್ನು ಕೊಡುವ ಹಾಗೆ ಪಾರ ನಭೆಗಳಿಗೂ ಆಯಾಯ ಪ್ರದೇಶದಲ್ಲಿಯ ಕಂದಾಯ ವಸೂಲಿಯಲ್ಲಿಯ ಭಾಗದ ಅಂಶವನ್ನು ಕೊಡುವುದಕ್ಕೆ ಏನಾದರೂ ಒಂದು ಕ್ರಮ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಿರುವ ಮುನಿಸಿಪಲ್ ಆಕ್ಟ್‌ನಲ್ಲಿ ಆ ರೀತಿ ಕೊಡುವುದಕ್ಕೆ ಏರ್ಪಾಡು ಇಲ್ಲ. ಕಾನೂನು ತಿದ್ದುಪಡಿ ಮಾಡಿದರೆ ಕೊಡುವುದಕ್ಕೆ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಾರ ನಭೆ ಕಾನೂನು ತಿದ್ದುಪಡಿ ಮಾಡಿದರೆ ಕಂದಾಯದ ಒಂದು ಭಾಗ ಕೊಡುವುದಕ್ಕೆ ಸಾಧ್ಯವಿದೆ ಎಂದು ಉತ್ತರ ಹೇಳಿದರು. ಅಭಿವೃದ್ಧಿ ಕಾರ್ಯಕ್ರಮ ಕ್ಕಾಗಿ ತಾಲ್ಲೂಕ್ ಬೋರ್ಡು ಮತ್ತು ಪಂಚಾಯತಿಗಳಿಗೆ ಈ ರೀತಿ ಕಂದಾಯದ ಒಂದು ಅಂಶವನ್ನು ಕೊಡುವಾಗುತ್ತದೆ. ಅದೇ ರೀತಿ ಪಾರ ನಭೆಗಳೂ ಕೂಡ ಅಭಿವೃದ್ಧಿ ಕಾರ್ಯ ಮಾಡಬೇಕಾಗಿರುವುದರಿಂದ ಹಣ ಒದಗಿಸುವುದು ಸೂಕ್ತವಲ್ಲವೇ ?